**1 ನೇ ಹೆಚ್ಚುವರಿ ಜಿಲ್ಲಾ  ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ, ಮಡಿಕೇರಿ-ಕೊಡಗು**
**ಎಂ.ವಿ.ಸಿ ಸಂಖ್ಯೆಃ 41/2024**

**PW-1**

**ಸಾಕ್ಷಿಯನ್ನು ದಿನಾಂಕ 22-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ. ಕೆ.ಎಸ್.ಆರ್. ವಕೀಲರಿಂದಃ**

1. ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರಿಕೆ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

| | | |
|---|---|---|
| Certified copy of the FIR | ನಿಪಿ-1 | ಎಂದು ಗುರುತಿಸಲಾಯಿತು. |
| Certified copy of the complaint | ನಿಪಿ-2 | ಎಂದು ಗುರುತಿಸಲಾಯಿತು. |
| Certified copy of the complaint | ನಿಪಿ-3 | ಎಂದು ಗುರುತಿಸಲಾಯಿತು. |
| Certified copy of the Mahazar | ನಿಪಿ-4 | ಎಂದು ಗುರುತಿಸಲಾಯಿತು. |
| Certified copy of the Motor Vehicle Accident report | ನಿಪಿ-5 | ಎಂದು ಗುರುತಿಸಲಾಯಿತು. |
| Certified copy of the Wound certificate | ನಿಪಿ-6 | ಎಂದು ಗುರುತಿಸಲಾಯಿತು. |
| Certified copy of the charge sheet | ನಿಪಿ-7 | ಎಂದು ಗುರುತಿಸಲಾಯಿತು. |
| Discharge summery issued by Manipal Hospital | ನಿಪಿ-8 | ಎಂದು ಗುರುತಿಸಲಾಯಿತು. |
| Discharge summary issued by AL-ANSAAR hospital | ನಿಪಿ-9 | ಎಂದು ಗುರುತಿಸಲಾಯಿತು. |
| Radiology report | ನಿಪಿ-10 | ಎಂದು ಗುರುತಿಸಲಾಯಿತು. |
| Radiology report | ನಿಪಿ-11 | ಎಂದು ಗುರುತಿಸಲಾಯಿತು. |
| Radiology report | ನಿಪಿ-12 | ಎಂದು ಗುರುತಿಸಲಾಯಿತು. |
| Notarized copy of DL of petitioner (after verifying the | ನಿಪಿ-13 | ಎಂದು ಗುರುತಿಸಲಾಯಿತು. |

| | | |
|---|---|---|
| same with the original ) | | |
| Notarized copy of Aadhaar card of petitioner (after verifying the same with the original ) | ನಿಪಿ-14 | ಎಂದು ಗುರುತಿಸಲಾಯಿತು. |
| Two Photographs of the petitioner | ನಿಪಿ-15 | ಎಂದು ಗುರುತಿಸಲಾಯಿತು. |
| Receipt issued by the Studio along with the CD | ನಿಪಿ-16 | ಎಂದು ಗುರುತಿಸಲಾಯಿತು. |
| Medical bills and prescription | ನಿಪಿ-17 | ಎಂದು ಗುರುತಿಸಲಾಯಿತು. |

**ಪಾಟೀಸವಾಲು-1 ನೇ ಎದುರುದಾರರ ಪರ ಶ್ರೀ ಎಂ.ಎ.ಎನ್., ವಕೀಲರಿಂದಃ**

2. ಅಪಘಾತ ಆಗುವ ದಿನ ನಾನು ನನ್ನ ವಾಹನವನ್ನು ಅಜಾಗರೂಕತೆ, ಅತೀವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿ 1 ನೇ ಎದುರುದಾರರ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ನಿರ್ಲಕ್ಷ್ಯದಿಂದ ಆಗಿದೆ ಎಂದು FIR 236/2023 ದಾಖಲಾಗಿದೆ ಎಂದರೆ ಸರಿ. ನನ್ನ ತಪ್ಪಿನಿಂದ ಮತ್ತು ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿದ್ದರೂ ಸಹಾ ನಾನು ಪೊಲೀಸರ ಮೇಲೆ ಒತ್ತಡವೇರಿ 1 ನೇ ಎದುರುದಾರರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಲು ಸಫಲನಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ನನಗೆ ಈ ಅಪಘಾತದಿಂದ ಯಾವುದೇ ಗಂಭೀರ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ 12 ಲಕ್ಷದಷ್ಟು ವೈದ್ಯಕೀಯ ಚಿಕಿತ್ಸೆಗೆ ನನಗೆ ಖರ್ಚಾಗಿರಲಿಲ್ಲ ಎಂದರೆ ಸರಿಯಲ್ಲ.

3. ನಾನು ಬೆಂಗಳೂರಿನಲ್ಲಿ ಸೇಲ್ಸ್ ಮ್ಯಾನ್ ಆಗಿ ಕೆಲಸ ಮಾಡಿಕೊಂಡು ತಿಂಗಳಿಗೆ 20,000/- ರೂಪಾಯಿಗಳಷ್ಟು ಸಂಬಳ ನನಗೆ ಬರುತಿತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಈಗಲೂ ಸಹ ನಾನು ಆರೋಗ್ಯವಾಗಿದ್ದೇನೆ ಮತ್ತು ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಈ ಅರ್ಜಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ನನ್ನ ವೈದ್ಯಕೀಯ ಚಿಕಿತ್ಸಾ ಸಮಯದಲ್ಲಿ ಸಹಾಯಕರಿಗೆ 60,000/- ರದಷ್ಟು ಹಣ ಮತ್ತು ಪ್ರಯಾಣಕ್ಕೆ 90,000/- ರದಷ್ಟು ಹಣ ಖರ್ಚಾಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಕೆಲಸಕ್ಕೆ ಹೋಗುತ್ತೇನೆ ಮತ್ತು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ ನಿಪಿ-17 ರ ದಾಖಲೆಗಳನ್ನು ಈ ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**2 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.